**ದಿನಾಂಕಃ 12.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ**

ನಾನು ನನ್ನ ಹೆಚ್ಚುವರಿ ಸಾಕ್ಷ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದನ್ನು ನಾನೇ ಹೇಳಿ ಬೆರಳಚ್ಚು ಮಾಡಿಸಿ ಓದಿ, ತಿಳಿದುಕೊಂಡು ಸಹಿಯನ್ನು ಹಾಕಿರುತ್ತೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ. ನನ್ನ ಬಳಿ ಈಗ ಮೂಲ ದಾಖಲೆ ಇಲ್ಲದೆ ಇರುವುದರಿಂದ ನಾನು ಸಲ್ಲಿಸಿರುವ ದೃಢೀಕೃತ ನಕಲನ್ನು ನಿಶಾನೆಯನ್ನಾಗಿ ಪರಿಗಣಿಸಲು ಈ ಮೂಲಕ ಕೋರುತ್ತೇನೆ. (ಸದರಿ ಪ್ರಮಾಣ ಪತ್ರ ಹಾಗೂ ವಾದಿಯ ಹೇಳಿಕೆಯನ್ನು ಪರಿಗಣಿಸಿ ವಾದಿಯು ಹಾಜರುಪಡಿಸಿರುವ ದೃಢೀಕೃತ ನಕಲನ್ನು ನಿಶಾನೆಯನ್ನಾಗಿ ತೆಗೆದುಕೊಳ್ಳಲಾಗಿದೆ. ಅದರಂತೆ

1. The attested copy of the sale deed dated 03.04.1921 is got marked as Ex.P12.

2. The two colour photographs annexed with the certificate U/Sec. 65(B) of Indian Evidence Act marked respectively is got marked as Ex.P13 and 14. ಎಂದು ಗುರುತಿಸಲಾಯಿತು.

ಆದ್ದರಿಂದ ನನ್ನ ಪ್ರಮಾಣ ಪತ್ರದಲ್ಲಿ ಕೋರಿರುವಂತೆ ದಾವೆಯನ್ನು ಡಿಕ್ರಿ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲು -** ಪ್ರತಿವಾದಿಯು ಏಕತರ್ಫಿಯವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**